# ಮೊದಲು ಮನುಷ್ಯರಾಗಿ...

ನಾನಾಗ ಕೃಷ್ಣರಾಜ ಸಾಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿಯಲ್ಲಿದ್ದೆ. ಸ್ಕೂಲ್ ಡೇ ಸಂದರ್ಭ. ಆಗ ಎರಡು ದಿನ ಆ ಕಾರ್ಯಕ್ರಮಗಳು ನಡೆಯುತ್ತಿದ್ದವು. ಮಕ್ಕಳಿಗೆ ಊಟ, ಆಟೋಟ, ಸಾಂಸ್ಕೃತಿಕ ಚಟುವಟಿಕೆಗಳು, ಬಹುಮಾನ ವಿತರಣೆ, ಒಳ್ಳೆಯ ಭಾಷಣಕಾರರಿಂದ ಭಾಷಣ ಇತ್ಯಾದಿ.

ಸಾಮಾನ್ಯವಾಗಿ ಪ್ರಸಿದ್ಧ ಲೇಖಕರು ಭಾಷಣಕಾರರಾಗಿರುತ್ತಿದ್ದರು. ನಾವು ತ.ರಾ.ಸು, ಚದುರಂಗ, ಕಾಳಿಂಗರಾಯರು ಮುಂತಾದವರನ್ನು ಇಂತಹ ಸಂದರ್ಭಗಳಲ್ಲಿ ನೋಡಿದ್ದೆವು. ಆ ವರ್ಷ ಪಾಂಡವಪುರದ ವಿಜಯಾ ಪ್ರೌಢಶಾಲೆಯ ಮುಖ್ಯಸ್ಥರು ಬಂದಿದ್ದರು. ಸುಬ್ರಹ್ಮಣ್ಯಂ ಎಂದು ಅವರ ಹೆಸರು.

ಅವರು ಭಾಷಣ ಆರಂಭಿಸಿದ ಕೂಡಲೇ, ‘ನಿಮ್ಮಲ್ಲಿ ಯಾರು ಡಾಕ್ಟರ್ ಆಗುವಿರಿ ಕೈ ಎತ್ತಿ?’ ಎಂದರು. ನಾವೆಲ್ಲಾ ಕೈ ಎತ್ತಿದೆವು. ನಂತರ ‘ಯಾರು ಎಂಜಿನಿಯರ್ ಆಗುತ್ತೀರಾ? ಯಾರು ಟೀಚರ್ ಆಗುತ್ತೀರಾ? ಯಾರು ಲಾಯರ್ ಆಗುತ್ತೀರಾ? ಯಾರು ಪೊಲೀಸ್ ಡಿಪಾರ್ಟ್ಮೆಂಟ್‌ಗೆ ಹೋಗುತ್ತೀರಾ?’ ಎಂದೆಲ್ಲಾ ಪ್ರಶ್ನಿಸಿದರು.

ತಮಾಷೆ ಎಂದರೆ, ನಾವು ಎಲ್ಲಾ ಪ್ರಶ್ನೆಗಳಿಗೂ ಕೈ ಎತ್ತಿದ್ದೆವು. ಕೊನೆಗೆ ಅವರು, ‘ತುಂಬಾ ಸಂತೋಷ. ನಿಮಗೆ ಓದುವ ಆಸಕ್ತಿ ಇದೆ. ಒಳ್ಳೆಯ ಹುದ್ದೆಗಳಿಗೆ ಸೇರಬೇಕೆಂಬ ಅಪೇಕ್ಷೆಯೂ ಇದೆ. ನೀವು ಡಾಕ್ಟರ್ ಆಗಿ, ಎಂಜಿನಿಯರ್ ಆಗಿ, ಲಾಯರ್ ಆಗಿ, ಟೀಚರ್ ಆಗಿ, ಆದರೆ ಮೊದಲು ಮಾನವರಾಗಿ. ಮಾನವೀಯ ಗುಣಗಳನ್ನು ಬೆಳೆಸಿಕೊಂಡಾಗ ಮಾತ್ರ ನೀವು ಯಾವುದೇ ವೃತ್ತಿಯಲ್ಲಿದ್ದರೂ ಯಶಸ್ಸು ಗಳಿಸಬಹುದು’ ಎಂದರು.

ಈ ಮಾತುಗಳು ನನ್ನ ಮೇಲೆ ತುಂಬಾ ಪರಿಣಾಮ ಬೀರಿದವು. ನಾನು ಇಷ್ಟಪಟ್ಟು ಉಪಾಧ್ಯಾಯಿನಿಯಾದೆ. ನನ್ನ ವಿದ್ಯಾರ್ಥಿಗಳಿಗೆ ಪ್ರಾಮಾಣಿಕತೆಯ ಪಾಠ ಕಲಿಸಿದೆ. ನನ್ನ ಸಹೋದ್ಯೋಗಿ, ಅಣ್ಣನ ಸಮಾನರಾದ ಕುಶಾಲನಗರದ ನಝೀರ್ ಅಹಮದ್ ಅವರು ಕೂಡ ನನಗೆ ಜೀವನದ ಪಾಠ ಕಲಿಸಿದವರು. ಈ ಇಬ್ಬರೂ ನನ್ನ ಬಾಳಿನ ಮಾರ್ಗದರ್ಶಕರು. ಅವರಿಗೆ ನನ್ನ ನಮನಗಳು.

—ಮುಕ್ತಾ ಸಿ.ಎನ್.



# ಓದುವ ಕಿಚ್ಚು ಹೊತ್ತಿಸಿದವರು

ಸವಣೂರು ತಾಲ್ಲೂಕಿನ ಒಂದು ಸಣ್ಣ ಹಳ್ಳಿ ನನ್ನದು. ಅಲ್ಲಿ ಏಳನೇ ತರಗತಿಯವರೆಗೆ ಮಾತ್ರ ಓದು. ಹೈಸ್ಕೂಲಿಗೆ ಹೋಗಬೇಕೆಂದರೆ ಪಕ್ಕದೂರಿಗೆ ದಿನವೂ 8 ಕಿ.ಮೀ. ನಡೆಯಬೇಕು. ಆವರೆಗೂ ಯಾವ ಹುಡುಗಿಯರೂ ಹೋಗಿರಲಿಲ್ಲವಂತೆ. ನನ್ನಪ್ಪ ಆ ಹೈಸ್ಕೂಲಿಗೆ ಸೇರಿಸಿದರು. ಯಾವುದಕ್ಕೂ ಭಯಪಡಬೇಡ, ಚೆನ್ನಾಗಿ ಓದಬೇಕು ಅಂತ ದಿನನಿತ್ಯ ಹೇಳುತ್ತಿದ್ದರು. ಮಳೆ ಬಂದು ಹಳ್ಳ ತುಂಬಿದರೆ ನಾನು ಮನೆಗೆ ಹೋಗುವ ಹಾಗಿರಲಿಲ್ಲ. ಆಗೆಲ್ಲ ನಮ್ಮ ಕನ್ನಡ ಮೇಷ್ಟ್ರು ಲಿಂಗಾರೆಡ್ಡಿ ಶೇರಿಯವರ ಮನೆಯಲ್ಲೇ ಉಳಿಯಬೇಕಿತ್ತು. ನಾನು ಶಾಲೆನೂ ಬೇಡ ಏನು ಬೇಡ ಎಂದು ಅಳುತ್ತಾ ಹಟ ಮಾಡಿದಾಗ ಅಣ್ಣನಂತೆ, ಅಪ್ಪನಂತೆ ರಮಿಸಿ ಧೈರ್ಯ ತುಂಬಿ, ಓದಿದರೆ ಏನೆಲ್ಲಾ ಸಾಧಿಸಬಹುದು ಅಂತ ದೊಡ್ಡ ದೊಡ್ಡ ಮಹಿಳೆಯರ ಸಾಧನೆಗಳನ್ನು ಕಣ್ಣಿಗೆ ಕಟ್ಟುವ ಹಾಗೆ ಹೇಳುತ್ತಿದ್ದರು. ‘ನೀನು 10ನೇ ತರಗತಿಯಲ್ಲಿ ಪಾಸಾದರೆ ಇಡೀ ನಿನ್ನೂರಿಗೆ ನೀನೇ ಮೊದಲಿಗಳಾಗುತ್ತಿಯಾ’ ಅಂತ ನನಗೆ ಶಾಲೆ ಕಡೆ ಕರೆದೊಯ್ಯುತ್ತಿದರು. ಭಾಷಣ ಮಾಡಲು, ಪ್ರಬಂಧ ಬರೆಯಲು ಪ್ರೋತ್ಸಾಹಿಸುತ್ತಿದ್ದರು. ನಾನು ಮೊದಲ ಸಲ ಕವಿಗೋಷ್ಠಿಯಲ್ಲಿ ಬಹುಮಾನ ದೊರೆತದ್ದನ್ನು ತಿಳಿಸಿದಾಗ ಅದೆಷ್ಟು ಖುಷಿಪಟ್ಟರು... ಆಕಾಶವಾಣಿ ಯುವವಾಣಿಯಲ್ಲಿ ಕವಿತೆ ಓದಿದಾಗ ಇಡೀ ಶಾಲೆಗೆ ಹೇಳಿ ಸಂಭ್ರಮಿಸಿದ್ದರಂತೆ. ಬಹುಶಃ ಇಂಥ ಗುರು ನನಗೆ ಸಿಗದೇ ಹೋಗಿದ್ದರೆ ನಾನಿಂದು ಉಪನ್ಯಾಸಕಿಯಾಗಿ, ಪ್ರಾಚಾರ್ಯಳಾಗಿ ಗುರುತಿಸಿಕೊಳ್ಳುತ್ತಿರಲಿಲ್ಲವೇನೋ. ಮಳೆಗೆ ಅಂಜಿ, ಬಿಸಿಲಿಗೆ ಹೆದರಿ, ನಡೆಯಲು ಆಗದು ಎಂದು ಕೈ ಚೆಲ್ಲಿದಾಗ ನನ್ನಲ್ಲಿ ಓದುವ ಕಿಚ್ಚನ್ನು ಹಚ್ಚಿಸಿ ಅಕ್ಷರಜ್ಞಾನ ಕೊಟ್ಟ ಗುರುವನ್ನು ದಿನವೂ ನೆನೆಯುತ್ತಲೇ ಇರುತ್ತೇನೆ.

—ನಿರ್ಮಲಾ ಶಿವನಗುತ್ತಿ, ಕೊಟ್ಟೂರು

**ಬದುಕಿನ ಶಕ್ತಿದೇವತೆ:** ನವರಾತ್ರಿ ಹಬ್ಬದಲ್ಲಿ ಶಕ್ತಿರೂಪಿಣಿ ದೇವಿಯನ್ನು ಆರಾಧಿಸುತ್ತೇವೆ. ನಮ್ಮ ಬದುಕಿನಲ್ಲಿಯೂ ಮನೋಸ್ಥೈರ್ಯ ತುಂಬುವ ಒಂದು ಜೀವ ಇದ್ದೇ ಇರುತ್ತದೆ. ಜೀವನವೇ ಸಾಕೆನಿಸುವಾಗ, ಇದಿನ್ನು ನನ್ನಿಂದ ಆಗದು ಎಂದೆನಿಸಿದಾಗ ನಿಮ್ಮೊಟ್ಟಿಗೆ ನಿಂತ, ನಿಮ್ಮಲ್ಲಿ ಧೈರ್ಯ ತುಂಬಿದ, ನಿಮ್ಮ ಬದುಕಿನ ಶಕ್ತಿರೂಪಿಣಿಯ ಬಗ್ಗೆ ಬರೆದು ಕಳಿಸಿ. ನಿಮ್ಮ ಈ ಅಕ್ಷರ ಋಣ ತೀರಿಸಲು 150 ಶಬ್ದಮಿತಿ. ಜೀವನಪ್ರೀತಿ ತುಂಬಿ, ಸ್ಫೂರ್ತಿ ನೀಡಿದವರ ಬಗ್ಗೆ ಬರೆದು ಕಳುಹಿಸಲು ಕೊನೆಯ ದಿನ ನವೆಂಬರ್ 2.

ಇಮೇಲ್– editorsu@sudha.co.in